ಆ) ಬಂದಿದೆ.

ಇ) ಸದರಿ ಪ್ರಸ್ತಾವನೆಗಳನ್ನು ಕುರಿತು ದಿನಾಂಕ 16.06.2014ರಂದು ನಡೆದ SLSSC ಸಭೆಯಲ್ಲಿ ಚರ್ಚಿಸಿ ಯೋಜನಾ ವ್ಯಾಪ್ತಿಯ ಗ್ರಾಮಗಳ ತಲಾ ವೆಚ್ಚ (Per Capita Cost) ₹ 7000/–ಗಳಿಗಿಂತಲೂ ಅಧಿಕವಾಗಿರುವುದರಿಂದ ರಾಜ್ಯ ತಾಂತ್ರಿಕ ಸಂಸ್ಥೆ (STA) ಪರಿಶೀಲನೆಗೊಳಪಡಿಸಲಾಗಿದೆ.

ಮಹಾನಗರದಲ್ಲಿ ಉಪನಗರ ರೈಲು ಯೋಜನೆ

2534(3330); (ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಿಂದ ವರ್ಗಾವಣೆಯಾದ ಪ್ರಶ್ನೆ)

ಶ್ರೀ ಅಶೋಕ್ ಆರ್. (ಪದ್ಮನಾಭನಗರ)

ಅ) ರಾಜ್ಯದಲ್ಲಿ ಉಪನಗರ ರೈಲು ಸಂಚಾರಿ ಯೋಜನೆಯನ್ನು ತಯಾರಿಸಲು ಸರ್ಕಾರ ಉದ್ದೇಶಿಸಿದೆಯೇ; ಎಲ್ಲೆಲ್ಲಿ ಈ ಯೋಜನೆ ಕಾರ್ಯಗತಗೊಳಿಸಲಾಗುವುದು; ಕಾರ್ಯಗತಗೊಳಿಸಲಾಗುವುದು;

ಇದಕ್ಕಾಗಿ ಗುರುತಿಸಿರುವ ನಗರ ಸ್ಥಳಗಳು ಯಾವುವು; ಸಂಚರಿಸುವ ಮಾರ್ಗಗಳು ಯಾವುವು;

ಆ) ಈ ಯೋಜನೆಯ ತ್ವರಿತ ಅನುಷ್ಠಾನಕ್ಕಾಗಿ ಸರ್ಕಾರ ಸಂಕಲ್ಪ ಮಾಡಿದ್ದು ಯಾವಾಗ; ಯೋಜನೆಯನ್ನು ಎಷ್ಟು ಹಂತಗಳಲ್ಲಿ ರೂಪಿಸಲಾಗುವುದು; ಇದರ ಯೋಜನಾ ಗಾತ್ರ ವೆಚ್ಚವೆಷ್ಟು; ಇದಕ್ಕೆ ಅನುಮೋದನೆ ನೀಡುವುದು ಯಾರು;

ಇ) ಉಪನಗರ ರೈಲು ಸಂಚಾರದ ನಿರ್ಮಾಣ ವೆಚ್ಚ ಪ್ರತಿ ಕಿ.ಮೀ. ಎಷ್ಟು ತಲುಪಲಿದೆ; ಮೆಟ್ರೋ ರೈಲು ಸಂಚಾರ ವೆಚ್ಚ ಪ್ರಯಾಣ ದರ ಹಾಗೂ ಉಪನಗರ ರೈಲು ಪ್ರಯಾಣ ದರಗಳಲ್ಲಿ ವ್ಯತ್ಯಾಸಗಳಿವೆಯೇ;

ಈ) ಈ ರೀತಿಯ ಉಪನಗರ ಯೋಜನೆಗಳು ದೇಶದಲ್ಲಿ ಯಾವ ಯಾವ ರಾಜ್ಯ ನಗರಗಳಲ್ಲಿ ಅಸ್ತಿತ್ವದಲ್ಲಿವೆ. ಇದನ್ನು ರಾಜ್ಯದ ಬೆಂಗಳೂರು ಸೇರಿದಂತೆ ಯಾವ ಯಾವ ನಗರಗಳಲ್ಲಿ ವಿಸ್ತರಿಸಲು ಸರ್ಕಾರ ಚಿಂತಿಸಿದೆ;

ಉ) ಸದರಿ ಯೋಜನೆ ಕಲ್ಪನೆಯ ಸಾಕಾರಕ್ಕೆ ಸರ್ಕಾರದ ನಿಲುವೇನು

ಶ್ರೀ ವಿನಯಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು)

ಅ) ಹೌದು.

ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಜಾರಿಗೊಳಿಸಲು ಮೆ॥ ರೈಟ್ಸ್ ಮುಖಾಂತರ ಪೂರ್ವಸಾಧ್ಯತಾ ವರದಿಯನ್ನು ತಯಾರಿಸಲಾಗಿದೆ. ಸದರಿ ಸಂಸ್ಥೆಯು ತಯಾರಿಸಿದ "ಬೆಂಗಳೂರು ಉಪನಗರ ರೈಲು ಯೋಜನೆ" ಯ ಪೂರ್ವಸಾಧ್ಯತಾ ವರದಿಯಲ್ಲಿ, ಈಗಾಗಲೇ ಲಭ್ಯವಿರುವ ರೈಲ್ವೇ ಮೂಲಭೂತ ಸೌಕರ್ಯವನ್ನು ಬಳಸಿಕೊಂಡು ಈ ಯೋಜನೆಯನ್ನು ಮುಖ್ಯವಾಗಿ ಬೆಂಗಳೂರು–ಬಂಗಾರಪೇಟೆ, ಬೆಂಗಳೂರು–ಮಂಡ್ಯ, ಬೆಂಗಳೂರು–ತುಮಕೂರು, ಯಶವಂತಪುರ– ಬೈಯ್ಯಪ್ಪನಹಳ್ಳಿ, ಯಶವಂತಪುರ–ಚಿಕ್ಕಬಳ್ಳಾಪುರ, ಬೆಂಗಳೂರು–ದೊಡ್ಡಬಳ್ಳಾಪುರ ಕಾರಿಡಾರ್‌ಗಳಲ್ಲಿ ಅನುಷ್ಠಾನಗೊಳಿಸಲು ಪ್ರಸ್ತಾಪಿಸಲಾಗಿದೆ.

ಆ) ಪೂರ್ವಸಾಧ್ಯತಾ ವರದಿಯಲ್ಲಿ, "ಬೆಂಗಳೂರು ಉಪನಗರ ರೈಲು ಯೋಜನೆ" ಯ ತ್ವರಿತ ಅನುಷ್ಠಾನಕ್ಕಾಗಿ ಬೆಂಗಳೂರು ಉಪನಗರ ರೈಲು ಯೋಜನೆ ಹಂತ–1ಎ ಯನ್ನು ಆದ್ಯತೆಯ ಆಧಾರದ ಮೇಲೆ ಜಾರಿಗೊಳಿಸಲು ಶಿಫಾರಸ್ಸು ಮಾಡಲಾಗಿದೆ. ಹಂತ–1ಎ ರ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಅನುಮೋದನೆ ನೀಡಲಾಗಿದ್ದು, ವರದಿಯು ತಯಾರಿಕೆ ಹಂತದಲ್ಲಿದೆ.

ಪೂರ್ವಸಾಧ್ಯತಾ ವರದಿಯಲ್ಲಿ ಈ ಯೋಜನೆಯನ್ನು 3 ಹಂತಗಳಲ್ಲಿ ಅನುಷ್ಠಾನಗೊಳಿಸಲು ಶಿಫಾರಸ್ಸು ಮಾಡಿದೆ. ಪೂರ್ವಸಾಧ್ಯತಾ ವರದಿಯ ಪ್ರಕಾರ ಹಂತ–1ಎ ರ ಯೋಜನಾ ಗಾತ್ರ ₹ 950.00 ಕೋಟಿಗಳು.

ಇ) ಮೆ॥ ರೈಟ್ಸ್ ವರದಿಯ ಪ್ರಕಾರ ಉಪನಗರ ರೈಲು ಸಂಚಾರದ ನಿರ್ಮಾಣ ವೆಚ್ಚ ಪ್ರತಿ ಕಿಮೀಗೆ ₹ 15–20 ಕೋಟಿಗಳು. ವಿಸ್ತೃತಯೋಜನಾ ವರದಿ ಮತ್ತು ವ್ಯವಸ್ಥೆಯ ಕಾರ್ಯಾಚರಣೆ ಯೋಜನೆ ಅಂತಿಮವಾದ ನಂತರ ದರಗಳನ್ನು ನಿಗಧಿಪಡಿಸಲಾಗುವುದು.

ಈ) ಉಪನಗರ ರೈಲು ಯೋಜನೆಯ ಮುಂಬೈ, ಚೆನ್ನೈ, ಹೈದರಾಬಾದ್ ನಗರಗಳಲ್ಲಿ ಅಸ್ತಿತ್ವದಲ್ಲಿವೆ. ಬೆಂಗಳೂರನ್ನು ಹೊರತು ಪಡಿಸಿ ಬೇರೆ ಯಾವ ನಗರಗಳಿಗೂ ಉಪನಗರ ರೈಲು ಯೋಜನೆಯನ್ನು ವಿಸ್ತರಿಸುವ ಪ್ರಸ್ತಾವನೆ ಇರುವುದಿಲ್ಲ.

ಉ) ಮೆ॥ ರೈಟ್ಸ್ ಮುಖಾಂತರ ತಯಾರಿಸಿದ ಪೂರ್ವಸಾಧ್ಯತಾ ವರದಿಯ ಶಿಫಾರಸ್ಸಿನನ್ವಯ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಬೆಂಗಳೂರು ಉಪನಗರ ರೈಲು ಯೋಜನೆಯ ಹಂತ 1ಎ ರ ಅನುಷ್ಠಾನಕ್ಕಾಗಿ ವಿವರವಾದ ಯೋಜನಾ ವರದಿಯನ್ನು ಮೆ॥ ರೈಟ್ಸ್ ಮುಖಾಂತರ ತಯಾರಿಸಲಾಗುತ್ತಿದೆ.
2. ಈ ಯೋಜನೆಯನ್ನು ಅನುಷ್ಠಾನಗೊಳಿಸಲು "ಬೆಂಗಳೂರು ಉಪನಗರ ರೈಲು ಕಂಪನಿ ನಿಯಮಿತ" ಎಂಬ ವಿಶೇಷ ಉದ್ದೇಶದ ಸಂಸ್ಥೆಯನ್ನು ಕಂಪನಿಗಳ ಕಾಯ್ದೆ, 1956 ರನ್ವಯ ದಿನಾಂಕ:12–03–2014 ರಂದು ಸ್ಥಾಪಿಸಲಾಗಿದೆ.

ಈ ಯೋಜನೆಯನ್ನು ರಾಜ್ಯ ಸರ್ಕಾರದೊಂದಿಗೆ ಅನುಷ್ಠಾನಗೊಳಿಸಲು ಒಪ್ಪಿಗೆ ನೀಡಲು ಕೋರಿ ಭಾರತ ಸರ್ಕಾರದ ರೈಲ್ವೆ ಮಂತ್ರಾಲಯಕ್ಕೆ ದಿನಾಂಕ:28–10–2013 ರಂದು ಪ್ರಸ್ತಾವನೆಯನ್ನು ಕಳುಹಿಸಲಾಗಿದೆ.